ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	148
ಉತ್ತರಿಸಬೇಕಾದ ದಿನಾಂಕ	:	16.02.2022.
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿರುವ ಒಟ್ಟು ಅಮೃತ್ ಮಹಲ್ ಕಾವಲ್‌ಗಳು ಎಷ್ಟು; ಅವುಗಳ ವಿಸ್ತೀರ್ಣವೆಷ್ಟು; ಮತ್ತು ಈ ಅಮೃತ್ ಮಹಲ್ ಕಾವಲುಗಳು ಯಾವ ಯಾವ ಸರ್ಕಾರಿ ಇಲಾಖೆಗಳ ಅಧೀನದಲ್ಲಿವೆ; (ಜಿಲ್ಲಾವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು)</td><td>ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರವು, ಚಿಕ್ಕಮಗಳೂರು ಜಿಲ್ಲೆ ತರಿಕೆರೆ ತಾಲೂಕು, ಅಜ್ಜಂಪುರ ಕೇಂದ್ರವಾಗಿರುತ್ತದೆ ಇದಕ್ಕೆ ಸಂಬಂಧ ಪಟ್ಟಂತೆ 6 ಜಿಲ್ಲೆಗಳಲ್ಲಿ 63 ಕಾವಲುಗಳನ್ನು ಹೊಂದಿರುತ್ತದೆ.
<table>
<tr><th>ಕ್ರಸಂ</th><th>ಜಿಲ್ಲೆಗಳು</th><th>ಕಾವಲು ಸಂಖ್ಯೆ</th><th>ವಿಸ್ತೀರ್ಣ</th></tr>
<tr><td>1</td><td>ಚಿಕ್ಕಮಗಳೂರು</td><td>13</td><td>14339.37</td></tr>
<tr><td>2</td><td>ಚಿತ್ರದುರ್ಗ</td><td>24</td><td>34968.87</td></tr>
<tr><td>3</td><td>ದಾವಣಗೆರೆ</td><td>02</td><td>3685.71</td></tr>
<tr><td>4</td><td>ಹಾಸನ</td><td>15</td><td>11498.91</td></tr>
<tr><td>5</td><td>ತುಮಕೂರು</td><td>07</td><td>3417.36</td></tr>
<tr><td>6</td><td>ಮಂಡ್ಯ</td><td>02</td><td>357.32</td></tr>
<tr><td colspan="2">ಒಟ್ಟು</td><td>63</td><td>68267.54</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿರುವ ಅಮೃತ್ ಮಹಲ್ ಕಾವಲುಗಳಲ್ಲಿ ಎಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಲಾಗಿದೆ; ಈ ಒತ್ತುವರಿ ತೆರುವಿಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಮತ್ತು ಇಲಾಖಾವಾರು ಮಾಹಿತಿ ನೀಡುವುದು)</td><td>ಅಮೃತ್ ಮಹಲ್ ಕಾವಲುಗಳಲ್ಲಿ 10471.62 ಎಕರೆ ಪ್ರದೇಶವು ಒತ್ತುವರಿಯಾಗಿರುತ್ತದೆ. ಅಮೃತ್ ಮಹಲ್ ಕಾವಲು ಜಮೀನುಗಳ ಅನಧಿಕೃತ ಒತ್ತುವರಿ ತೆರವುಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ 61:ಎಲ್.ಜಿ.ಎ 2017: ಬೆಂಗಳೂರು, ದಿನಾಂಕ:02-01-2018 ರಂತೆ ಉಪ ವಿಭಾಗಾಧಿಕಾರಿಗಳ ನೇತೃತ್ವದ ವಿಶೇಷ ಕಾರ್ಯ ಪಡೆಯನ್ನು (Special Task Force for Eviction of encroachment of amruth mahal kaval land) ರಚಿಸಿ ಕ್ರಮ ವಹಿಸಲಾಗುತ್ತಿದೆ.
<table>
<tr><th>ಕ್ರಸಂ</th><th>ಜಿಲ್ಲೆಗಳು</th><th>ಒತ್ತುವರಿ ವಿಸ್ತೀರ್ಣ</th></tr>
<tr><td>1</td><td>ಚಿಕ್ಕಮಗಳೂರು</td><td>4514.10</td></tr>
<tr><td>2</td><td>ಚಿತ್ರದುರ್ಗ</td><td>1292.28</td></tr>
<tr><td>3</td><td>ದಾವಣಗೆರೆ</td><td>553.21</td></tr>
<tr><td>4</td><td>ಹಾಸನ</td><td>3846.73</td></tr>
<tr><td>5</td><td>ತುಮಕೂರು</td><td>172.00</td></tr>
<tr><td>6</td><td>ಮಂಡ್ಯ</td><td>93.30</td></tr>
<tr><td colspan="2">ಒಟ್ಟು</td><td>10471.62</td></tr>
</table></td></tr>
</table>

ಇ	ರಾಜ್ಯದ ಉಚ್ಚನ್ಯಾಯಾಲಯ ಸರ್ಕಾರದ ಅರಣ್ಯ ಮತ್ತು ಪಶುಸಂಗೋಪನೆ ಕಾರ್ಯದರ್ಶಿಗಳಿಗೆ ಒತ್ತುವರಿ ತೆರೆವಿನ ವಿಷಯದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಲು ಸಮನ್ಸ್ ಹೊರಡಿಸಿರುವುದು ನಿಜವೇ; (ಹಾಗಿದ್ದಲ್ಲಿ, ಈ ಪ್ರಕರಣದ ಪೂರ್ಣ ವಿವರ ನೀಡುವುದು)	ಅಪರ ಮುಖ್ಯಕಾರ್ಯದರ್ಶಿಗಳು ಅರಣ್ಯ ಇಲಾಖೆ ಹಾಗೂ ಉಪ ನಿರ್ದೇಶಕರು ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ ಇಲಾಖೆಯ ಒತ್ತುವರಿ ತೆರುವಿನ ವಿಷಯದಲ್ಲಿ ಉಚ್ಚನ್ಯಾಯಾಲಯದ ಮುಂದೆ ದಿನಾಂಕ:08-02-2022 ರಂದು ಹಾಜರಾಗಿರುತ್ತಾರೆ. ಪ್ರಕರಣದ ಸಂಖ್ಯೆ W.P.No:46528/2016(GM-For) ಬಾಸೂರು, ಅಮೃತ್‌ಮಹಲ್ ಕಾವಲಿನಲ್ಲಿ ಕಾವಲುಗಾರರು 9 ಜನರ ಪೈಕಿ 8 ಜನರು ಒಟ್ಟು 23 ಎಕರೆ ಭೂಮಿಯ ಒತ್ತುವರಿ ಮಾಡಿರುತ್ತಾರೆ ಸದರಿ ಒತ್ತುವರಿ ತೆರವುಗೊಳಿಸಿ ನ್ಯಾಯಾಲಯದಲ್ಲಿ Affidavit ಅನ್ನು ಸಲ್ಲಿಸಲಾಗಿದೆ ಈ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ.
ಈ	ರಾಜ್ಯದಲ್ಲಿರುವ ಈ ಅಮೃತ್ ಮಹಲ್ ಕಾವಲುಗಳಲ್ಲಿ ದೇಶಿಯ ತಳಿಗಳಾದ ಅಮೃತ, ಹಳ್ಳಿಕಾರ ಮುಂತಾದ ತಳಿಗಳನ್ನು ವೃದ್ಧಿ ಮಾಡಲು ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ ಅಭಿಯಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಯಾವುವು; ಈ ಯೋಜನೆ ಅಡಿ ಕೇಂದ್ರ ಸರ್ಕಾರದಿಂದ ದೊರೆತಿರುವ ಆರ್ಥಿಕ ನೆರವು ಎಷ್ಟು? (ಜಿಲ್ಲಾವಾರು ಮತ್ತು ಕಾರ್ಯಕ್ರಮವಾರು ಪೂರ್ಣ ಮಾಹಿತಿಯನ್ನು ನೀಡುವುದು)	ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ ಅಭಿಯಾನದಲ್ಲಿ ಅಮೃತ್ ಮಹಲ್ ತಳಿ ಸಂವರ್ಧನಾ ಉಪ ಕೇಂದ್ರ, ಲಿಂಗದಳ್ಳಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮೃತ್ ಮಹಲ್ ತಳಿಗಳ ಗೋಕುಲ ಗ್ರಾಮವನ್ನು ಸ್ಥಾಪಿಸಲಾಗುತ್ತಿದೆ. ಇದುವರೆವಿಗೆ ಈ ಯೋಜನೆಯಡಿ ರೂ.250 ಲಕ್ಷಗಳನ್ನು ಬಿಡುಗಡೆಯಾಗಿರುತ್ತದೆ. ಯೋಜನೆ ಅನುಷ್ಠಾನದ ಕಾರ್ಯ ಪ್ರಗತಿಯಲ್ಲಿದೆ.

ಪಸಂಮೀ ಇ-21 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು